ಅ) (1) ಮಾಗಡಿ ರೋಡ್ ಪೋಲೀಸ್ ವಸತಿಗಳಿಗೆ ಕೊಳವೆ ಬಾವಿಗಳ ಮೂಲಕ ನೀರನ್ನು ಒದಗಿಸಲಾಗುತ್ತಿದೆ.

(2) ಜಾರಕ ಬಂಡೆ ಕಾವಲ್‌ನಲ್ಲಿನ ವಸತಿಗಳಿಗೆ ನೀರನ್ನೊದಗಿಸುವ ಬಗ್ಗೆ, ಬಿ.ಡಿ.ಎ., ಬಿ.ಡಬ್ಲ್ಯೂ.ಎಸ್.ಎಸ್. ಮತ್ತು ಪೋಲೀಸ್ ಇಲಾಖೆಯವರೊಂದಿಗೆ ಸಮಾಲೋಚಿಸಿ ನೀರು ಸರಬರಾಜನ್ನು ಅಭಿವೃದ್ಧಿ ಪಡಿಸಲೂ ಕ್ರಮ ಕೈಗೊಳ್ಳಲಾಗುತ್ತದೆ.

ದಕ್ಷಿಣ ಕನ್ನಡದಲ್ಲಿ ಜವಾಹರ್ ರೋಜ್‌ಗಾರ್ ಯೋಜನೆ ಅಡಿಯಲ್ಲಿ ನಿರ್ಮಿಸಿದ ಮಾನವ ದಿನಗಳ ಕುರಿತು.

1873-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) ; ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಜವಾಹರ್ ರೋಜ್‌ಗಾರ್ ಯೋಜನೆಯಡಿ 1989-90, 90-91ನೇ ಡಿಸೆಂಬರ್ ಅಂತ್ಯದವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮಾನವ ದಿನಗಳನ್ನು ಸೃಷ್ಟಿಸಲಾಯಿತು? ಹಾಗೂ ಈ ಉದ್ದೇಶಕ್ಕಾಗಿ ಖರ್ಚು ಮಾಡಲಾದ ಹಣವೆಷ್ಟು?

ಆ) ಇದರಲ್ಲಿ ಕಾರ್ಮಿಕರಿಗೆ ವೇತನದ ಒಂದು ಭಾಗವಾಗಿ ನೀಡಲಾದ ಆಹಾರ ಧಾನ್ಯಗಳ ಒಟ್ಟು ಮೌಲ್ಯವೆಷ್ಟು?

ಶ್ರೀ. ಕೆ.ಜೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 1989-90ನೇ ಸಾಲಿನಲ್ಲಿ 18.0578 ಮಾನವ ದಿನಗಳನ್ನು ಸೃಷ್ಟಿಸಲಾಗಿದ್ದು, ಈ ಬಗ್ಗೆ 402.89 ಲಕ್ಷ ರೂ.ಗಳನ್ನು ವಿನಿಯೋಗವಾಗಿದೆ. 90-91ನೇ ಸಾಲಿನಲ್ಲಿ ಡಿಸೆಂಬರ್ ಅಂತ್ಯದವರೆಗೆ 4.77076 ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದ್ದು, ಈ ಬಗ್ಗೆ 122.735 ಲಕ್ಷ ರೂ.ಗಳ ವಿನಿಯೋಗವಾಗಿದೆ.

ಆ) 1989-90ನೇ ಸಾಲಿನಲ್ಲಿ ರೂ. 45.405 ಲಕ್ಷ ರೂ. ಹಾಗೂ 90-91ರಲ್ಲಿ (ಡಿಸೆಂಬರ್ ಅಂತ್ಯದವರೆಗೆ) ರೂ.10.129 ಲಕ್ಷ ಮೌಲ್ಯದ ಆಹಾರ ಧಾನ್ಯಗಳನ್ನು ವೇತನದ ಭಾಗವಾಗಿ ಕಾರ್ಮಿಕರಿಗೆ ಪಂಚಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ

1874 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಲದ ಮಳೆಗಾಲದ ಋತುವಿನಲ್ಲಿ ಯಾವ ಯಾವ ಕಡೆಗಳಲ್ಲಿ ಸಮುದ್ರ ಕೊರೆತ ಉಂಟಾಗಿದೆಯೆಂಬ ವರದಿ ಸರ್ಕಾರಕ್ಕೆ ಬಂದಿದೆಯೆ (ಸ್ಥಳದ ವಿವರ ಮತ್ತು ಉಂಟಾದ ಹಾನಿಯ ಬಗ್ಗೆ ವಿವರವನ್ನೊದಗಿಸುವುದು)

ಆ) ಉಡುಪಿ ತಾಲ್ಲೂಕು ಕೋಡಿಬೆಂಗ್ರೆಯಲ್ಲಿ ಸಮುದ್ರ ಕೊರೆತಕ್ಕೆ ಒಳಗಾದ ಪ್ರದೇಶದ ವಿಸ್ತೀರ್ಣವೆಷ್ಟು ಉದ್ದ -ಅಗಲ ಹಾಗೂ ಸಂತ್ರಸ್ತರ ಮತ್ತು ಹಾನಿಯ ವಿವರ ನೀಡುವುದು

ಇ) ಈ ಸಂಬಂಧದಲ್ಲಿ ಸರ್ಕಾರದವರು ಕೈಗೊಂಡ ಪರಿಹಾರ ಕಾರ್ಯಕ್ರಮಗಳೇನು?

ಈ) ಕೇರಳ ರಾಜ್ಯದಲ್ಲಿ ಇರುವ ಕರಾವಳಿ ಪ್ರದೇಶದಲ್ಲಿರುವಂತೆ ಶಾಶ್ವತ ತಡೆಗೋಡೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ನಿರ್ಮಿಸುವ ಯೋಜನೆಯು ಸರ್ಕಾರದ ಮುಂದಿದೆಯೆ, ಹಾಗಿದ್ದಲ್ಲಿ ಅದರ ವಿವರಗಳೇನು?